ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 04/03/2020

# 2ನೇ ದಿನವೂ ಕಲಾಪ ಬರ್ಖಾಸ್ತು

ಉ.ವಾ. 4/3/20

## ದೊರೆಸ್ವಾಮಿ ಕುರಿತ ಯತ್ನಾಳ್ ಹೇಳಿಕೆ | ಪಟ್ಟು ಬಿಡದ ಕಾಂಗ್ರೆಸ್

ವಿಧಾನಸಭೆ: ಸಂವಿಧಾನದ ಮಹತ್ವದ ಬಗ್ಗೆ ಚರ್ಚಿಸಲೆಂದೇ ಮೀಸಲಾಗಬೇಕಿದ್ದ ಮಂಗಳವಾರದ ವಿಧಾನಮಂಡಲ ಕಲಾಪ ಧರಣಿ, ಗದ್ದಲದಲ್ಲೇ ಅಂತ್ಯಗೊಂಡಿತು.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್ .ದೊರೆಸ್ವಾಮಿ ಬಗ್ಗೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಹೇಳಿಕೆ ಕುರಿತು ಚರ್ಚೆಗೆ ಆಗ್ರಹಿಸಿ ಪ್ರತಿಪಕ್ಷ ಕಾಂಗ್ರೆಸ್ ಮಂಗಳವಾರವೂ ಧರಣಿ ನಡೆಸಿದ್ದರಿಂದ ಸತತ ಎರಡನೇ ದಿನವೂ ಕಲಾಪ ಬಲಿಯಾಯಿತು.

ಹನ್ನೊಂದು ಗಂಟೆಗೆ ನಿಗದಿಯಾಗಿದ್ದ ಕಲಾಪ ಮಧ್ಯಾಹ್ನ 1.35ಕ್ಕೆ ಪ್ರಾರಂಭಗೊಂಡಿತಾದರೂ ಚರ್ಚೆಗೆ ಅವಕಾಶ ನೀಡಲೇಬೇಕು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಪಟ್ಟು ಹಿಡಿದರು. ಸದನದ ಬಾವಿಗೆ ಇಳಿದ ಕಾಂಗ್ರೆಸ್ ಸದಸ್ಯರು ಭಾರತ್ ಮಾತಾ ಕೀ ಜೈ, ಸಂವಿಧಾನ ಉಳಿಸಿ ಎಂದು ಘೋಷಣೆ ಹಾಕಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಶಾಸಕರ ನಡುವೆ ಮಾತಿನ ಚಕಮಕಿಯೂ ನಡೆದು ಸದನದಲ್ಲಿ ಗದ್ದಲ ಕೋಲಾಹಲದ ವಾತಾವರಣ ನಿರ್ಮಾಣವಾಯಿತು.

ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ನಿಯಮ 363ರಡಿ ಚರ್ಚೆಗೆ ಕೋರಿ ಕಾಂಗ್ರೆಸ್ ಸಲ್ಲಿಸಿದ್ದ ನೋಟಿಸ್ ತಿರಸ್ಕರಿಸಿದರು. ▶ 7ನೇ ಪುಟಕ್ಕೆ

### ಭಾರೀ ಜಟಾಪಟಿ

ಸ್ಪೀಕರ್ ಕಚೇರಿಯಲ್ಲಿ ನಡೆದ ಮಾತುಕತೆ ಪ್ರಕಾರ ಚರ್ಚೆಗೆ ಅವಕಾಶ ಕೊಡಲು ಒಪ್ಪಲಾಗಿತ್ತು. ಆದರೆ, ಇದೀಗ ಬೇರೆ ವಾದ ಮಂಡಿಸಲಾಗುತ್ತಿದೆ. ಇದು ಪ್ರಜಾಪ್ರಭುತ್ವ ವಿರೋಧಿ ಹಾಗೂ ಸಂಸದೀಯ ನಡಾವಳಿಗೆ ವಿರುದ್ಧವಾದುದು. ಸ್ಪೀಕರ್ ಅವರು ಪಕ್ಷಪಾತಿಯಾಗಬಾರದು, ಹಿಟ್ಲರ್ ಆಡಳಿತ ನಡೆಯುತ್ತಿದೆ.

• ಸಿದ್ದರಾಮಯ್ಯ, ಪ್ರತಿಪಕ್ಷ ನಾಯಕ

---

ನಾನು ಚರ್ಚೆಗೆ ಅವಕಾಶ ಕೊಡುವ ಬಗ್ಗೆ ಹೇಳಿದ್ದು ಹೌದು. ಆದರೆ, ವಿಧಾನಮಂಡಲ ಕಾರ್ಯಕಲಾಪ ನಿಯಮಾವಳಿ ಪುಸ್ತಕ ಹಾಗೂ ಕೆಲವು ಹಿರಿಯ ಅನುಭವಿಗಳು, ಕಾನೂನು ತಜ್ಞರ ಜತೆ ಸಮಾಲೋಚನೆ ನಡೆಸಿದಾಗ ನಿಯಮ 363 ರಡಿ ನಿಮ್ಮ ಪ್ರಸ್ತಾಪದ ಬಗ್ಗೆ ಚರ್ಚೆಗೆ ಅವಕಾಶ ನೀಡಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ಬಂದಿದೆ. ಹೀಗಾಗಿ, ಸಾಧ್ಯವಿಲ್ಲ.

• ವಿಶ್ವೇಶ್ವರ ಹೆಗಡೆ ಕಾಗೇರಿ, ಸ್ಪೀಕರ್



ಯತ್ನಾಳ್ ಹೇಳಿಕೆಯು ಸಂವಿಧಾನದ ಕಲಂ 51(ಎ)(ಬಿ)ನ ಉಲ್ಲಂಘನೆ.

• ಸಿದ್ದರಾಮಯ್ಯ, ಪ್ರತಿಪಕ್ಷ ನಾಯಕ

---

ಸಂವಿಧಾನದ ಕಲಂ 51 ಎ ಮತ್ತು ಬಿ ನಲ್ಲಿ ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಉದಾತ್ತ ಆದರ್ಶ ಗೌರವಿಸುವುದು ಅನುಸರಿಸುವುದು ನಮ್ಮ ಕರ್ತವ್ಯ ಎಂದು ಇದೆ. ಉದಾತ್ತ ಧ್ಯೇಯ ಬೇರೆ ಉದಾತ್ತ ವ್ಯಕ್ತಿ ಬೇರೆ. ಇಲ್ಲಿ ವೈಯಕ್ತಿಕವಾಗಿ ಹೇಳಿಲ್ಲ.

• ಜೆ.ಸಿ.ಮಾಧುಸ್ವಾಮಿ, ಸಚಿವ

ವಿಷಯ: ರಾಜ್ಯ ವಿಧಾನ ಸಭೆ ಅಧಿವೇಶನ
ಪತ್ರಿಕೆಯ ಹೆಸರು ಉದಯವಾಣಿ ದಿ: 04/03/2020

# 2ನೇ ದಿನವೂ ಕಲಾಪ ಬಲಿಯಾಗಿದೆ

ಉ.ವಾ 4/3/20

**1ನೇ ಪುಟದಿಂದ ▸** ಜತೆಗೆ ಸದಸ್ಯರೊಬ್ಬರ ಮೇಲೆ ಆರೋಪ ಹಾಗೂ ನಿಮ್ಮ ನೋಟಿಸ್ ಆಧಾರದ ಮೇಲೆ ಆ ಸದಸ್ಯರಿಗೆ ನೋಟಿಸ್ ನೀಡಬೇಕಾಗಿರುವುದರಿಂದ ನಿಯಮಾವಳಿಗಳ ಪ್ರಕಾರ ಚರ್ಚೆಗೆ ಅವಕಾಶ ನೀಡಲು ಸಾಧ್ಯವಿಲ್ಲ ಎಂದು ರೂಲಿಂಗ್ ನೀಡಿದರು. ಇದಕ್ಕೆ ಒಪ್ಪದ ಕಾಂಗ್ರೆಸ್ ಸದಸ್ಯರು ಸದನದ ಬಾವಿಯಲ್ಲಿ ಘೋಷಣೆ ಹಾಕಿ ಧರಣಿ ಮುಂದುವರಿಸಿದ್ದರಿಂದ ಸದನ ಮಧ್ಯಾಹ್ನ 3.30 ಕ್ಕೆ ಮುಂದೂಡಲಾಯಿತು.



**ಸದನದಲ್ಲಿ ಶೆಟ್ಟರ್ ಮಾತನಾಡಿದರು.**

ಭೋಜನಾ ವಿರಾಮದ ನಂತರ ಕಲಾಪ ಆರಂಭಗೊಂಡಾಗ ಮತ್ತೆ ಚರ್ಚೆಗೆ ಪಟ್ಟು ಹಿಡಿದ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ಮುಂದುವರಿಸಿದ್ದರಿಂದ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಂವಿಧಾನದ ಕುರಿತು ಪ್ರಸ್ತಾವಿಕವಾಗಿ ಮಾತನಾಡಿ ಬುಧವಾರಕ್ಕೆ ಸದನ ಮುಂದೂಡಿದರು.

**ಸಂಧಾನ ಸಭೆ:** ಮಂಗಳವಾರ ಬೆಳಗ್ಗೆ ಸ್ಪೀಕರ್ ಅವರು ತಮ್ಮ ಕಚೇರಿಯಲ್ಲಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರನ್ನು ಆಹ್ವಾನಿಸಿ ಚರ್ಚಿಸಿದರು. ಆ ಸಂದರ್ಭದಲ್ಲಿ ಚರ್ಚೆಗೆ ಅವಕಾಶ ಕೊಡುತ್ತೇನೆ, ಮಧ್ಯಾಹ್ನದ ಒಳಗೆ ಚರ್ಚೆ ಮುಗಿಸಿ ನಂತರ ಸಂವಿಧಾನ ಕುರಿತು ಚರ್ಚೆ ಪ್ರಾರಂಭಿಸೋಣ ಎಂದು ಹೇಳಿದರು. ಯಾರ್‍ಯಾರು ಮಾತನಾಡಲಿದ್ದಾರೆ ಎಂಬ ಪಟ್ಟಿಯನ್ನೂ ಸಿದ್ದರಾಮಯ್ಯ ಸಲ್ಲಿಸಿದರು. ಆದರೆ, ಸ್ಪೀಕರ್ ವಿವೇಚನಾಧಿಕಾರ ಬಳಸಿ ನಿಯಮ 363 ರಡಿ ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಆಡಳಿತ ಪಕ್ಷ ಬಿಜೆಪಿ ಪಟ್ಟು ಹಿಡಿಯಿತು. ಕಾಂಗ್ರೆಸ್ ಪ್ರಸ್ತಾಪದಡಿ ಯತ್ನಾಳ್ ಅವರಿಗೆ ನೋಟಿಸ್ ನೀಡಬಾರದು ಎಂದು ಹೇಳಿತು. ಇದರಿಂದ ಸ್ಪೀಕರ್ ಇಕ್ಕಟ್ಟಿಗೆ ಸಿಲುಕುವಂತಾಯಿತು.

**ಮೇಲ್ಮನೆಯಲ್ಲೂ ಗದ್ದಲ:** ದೊರೆಸ್ವಾಮಿ ಕುರಿತ ಯತ್ನಾಳ್ ಹೇಳಿಕೆ ಮೇಲ್ಮನೆಯಲ್ಲೂ ಪ್ರತಿಧ್ವನಿಸಿತು. ಇದರ ನಡುವೆಯೇ ದೊರೆಸ್ವಾಮಿ ಅವರಿಗೆ ಬಿಜೆಪಿ ಸದಸ್ಯ ಎನ್.ರವಿಕುಮಾರ್ ಧಿಕ್ಕಾರ ಕೂಗಿದ್ದು ಮತ್ತಷ್ಟು ವಿವಾದ ಸೃಷ್ಟಿಸಿತು. ಪ್ರತಿಪಕ್ಷ ಸದಸ್ಯರು ರವಿಕುಮಾರ್ ಕ್ಷಮೆ ಕೇಳಬೇಕು, ಅವರ ಮಾತುಗಳನ್ನು ಕಡತದಿಂದ ತೆಗೆಯಬೇಕು ಎಂದು ಆಗ್ರಹಿಸಿದರು. ಆದರೆ, ಇದಕ್ಕೆ ಆಡಳಿತ ಪಕ್ಷದ ಸದಸ್ಯರು ಒಪ್ಪಲಿಲ್ಲ. ಜತೆಗೆ ರವಿಕುಮಾರ್ ಕೂಡ, ಯಾವುದೇ ಕಾರಣಕ್ಕೂ ಕ್ಷಮೆ ಕೋರುವುದಿಲ್ಲ ಎಂದು ಹೇಳಿದ್ದಾರೆ. ಈ ಗದ್ದಲದಿಂದಾಗಿ ಇಡೀ ದಿನ ಕಲಾಪ ನಡೆಯಲಿಲ್ಲ.

12(a)